Hospital at Kenkere Village in Arasikere Taluk

578 SRI HARNAHALLI RAMASWAMY (Gandasi)—Will the Minister for Health ahd Family Welfare be pleased to state.—

(a) whether there is a Hospital at Kenkere Village in Gandasi Hobli, Arasikere Taluk ;

(b) if so, whethere the local people are demanding for the construction of a building for the said hospital ;

(c) whether the Government is taking up the work of construction of the hospital building this year alone?

SRI M. MALLAPRA (Minister for Health and Family Welfare

(a) Yes.

(b) Yes.

(c) No.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:—ಕೆಂಕೆರೆ ಗ್ರಾಮದಲ್ಲಿರುವ ಆಸ್ಪತ್ರೆ ಎಷ್ಟು ವರ್ಷಗಳಿಂದ ನಡೆಯುತ್ತಿದೆ?

†ಶ್ರೀ ಎಂ. ಮಲ್ಲಪ್ಪ.—ಅದು ೧೯೭೬ ರಲ್ಲಿ ಪ್ರಾರಂಭವಾಗಿತ್ತು; ಈಗಲೂ ನಡೆಯುತ್ತಿದೆ. ಅದು ಪ್ರಾರಂಭವಾಗುವ ಕಾಲದಲ್ಲಿ ಸರ್ಕಾರದವರು ಒಂದು ಷರತ್ತು ಹಾಕಿದ್ದರು. ಅದು ಆ ಊರಿನಲ್ಲಿ ಆಸ್ಪತ್ರೆಗೆ ಕಟ್ಟಡ ಕಟ್ಟಬೇಕೆನ್ನುವುದು. ಆದರೆ, ಇಲ್ಲಿಯವರೆಗೂ ಕಟ್ಟಡ ಪ್ರಾರಂಭವಾಗಿಲ್ಲ. ಸಕಾಲದಲ್ಲಿ ಕಟ್ಟದಿದ್ದರೆ ಆಸ್ಪತ್ರೆಯನ್ನು ಬೇರೆ ಕಡೆಗೆ ವರ್ಗಾಯಿಸಬೇಕೆನ್ನುವ ಅಭಿಪ್ರಾಯ ಸರ್ಕಾರಕ್ಕಿತ್ತು. ಅದನ್ನಿಗ ಸರ್ಕಾರ ತೀವ್ರವಾಗಿ ಆಲೋಚನೆ ಮಾಡುತ್ತಿದೆ.

†ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಗ್ರಾಮದವರು ಹತ್ತು ಸಾವಿರ ರೂಪಾಯಿಗಳನ್ನು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಎಂ. ಮಲ್ಲಪ್ಪ.—ಈಗ ಕಟ್ಟಡಕ್ಕೆ ಒಟ್ಟು ಎಷ್ಟು ಹಣ ಬೇಕಾಗುತ್ತದೆ ಅದರಲ್ಲಿ ಅರ್ಧ ಭಾಗ ಊರಿನವರು ಕೊಟ್ಟರೆ, ಉಳಿದರ್ಧ ಭಾಗವನ್ನು ಸರ್ಕಾರ ಕೊಟ್ಟು, ಕಟ್ಟಡ ಕೆಲಸವನ್ನು ಪೂರ್ತಿ ಮಾಡುತ್ತದೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ.—ಅತ್ಯಂತ ಅವಶ್ಯವಿರುವ ಸ್ಥಳಗಳಲ್ಲಿ ಸರ್ಕಾರವೇ ಪೂರ್ತ ಹಣ ವಿಚ್ರ್ಚು ಮಾಡಿ ಆಸ್ಪತ್ರೆಗೆ ಕಟ್ಟಡವನ್ನು ಕಟ್ಟಿಸಬಹುದೆಂದು ನಿಯಮವಿರುವುದಾಗಿ ನಾನು ತಿಳಿದುಕೊಂಡಿದ್ದೇನೆ. ಕೆಂಕೆರೆ ಗ್ರಾಮದಲ್ಲಿ ಸುಮಾರು ಐದು ಸಾವಿರ ಜನ ಹಿಂದುಳಿದ ವರ್ಗಕ್ಕೆ ಸೇರಿದ ಜನರಿದ್ದಾರೆ. ಆದುದರಿಂದ, ಇದನ್ನು ಅತ್ಯಂತ ಅವಶ್ಯ ಸ್ಥಳವೆಂದು ಪರಿಗಣಿಸಿ, ಆ ಗ್ರಾಮದವರು ಕೊಟ್ಟಿರುವ ಹತ್ತು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಸರ್ಕಾರದವರು ಈ ಆಸ್ಪತ್ರೆ ಕಟ್ಟಡವನ್ನು ಕಟ್ಟಿಸುವರೆ?

ಶ್ರೀ ಎಂ. ಮಲ್ಲಪ್ಪ.—ಅದನ್ನು ಪರಿಶೀಲನೆ ಮಾಡಲಾಗುವುದು.

Construction of Bus Stands at Zalki, Bijapur District

585 SRI S. S. ARAKERI (Ballolli)—Will the Minister for Transport and Tourism be pleased to state:—

(a) whether the Chief Minister when he was the Minister for Transport during the year 1965-66, had laid the foundation Stone for

construction of Bus Stations at Zalki Circle, Indi Taluk, Bijapur District ;

(b) the reasons for not taking up the constructions of the said building ;

(c) whether it has come to the notice of Government that Zalki is situated on the National Highways and travelling Public are put to lot of inconvenience ;

(d) if so, when the Government take up the work of construction of the Bus Station at Zalki?

SRI R. GUNDU RAO (Minister for Transport and Tourism)

(a) Yes.

(b) Construction of bus stands by KSRTC is being taken up by them on priority basis.

(c) Government is not aware of the inconvenience caused to the travelling public since there are no such complaints from the Public.

(d) It is proposed by the Karnataka State Road Transport Corporation to include the work in the revised Budget for 1978-79.

ಶ್ರೀ ಎಸ್. ಎಸ್. ಆರಕೇರಿ.—೧೯೭೫-೭೬ನೇ ಸಾಲಿನಲ್ಲಿ ಈಗಿನ ಮುಖ್ಯಮಂತ್ರಿಗಳು ಆಗಿನ ಸಾರಿಗೆ ಮಂತ್ರಿಗಳಾಗಿದ್ದಾಗ ಜ್ವಳಕಿ ವಲಯದಲ್ಲಿ ಒಂದು ಬಸ್ಸು ನಿಲ್ದಾಣವನ್ನು ನಿರ್ಮಿಸುವ ಸಲುವಾಗಿ ಶಂಕು ಸ್ಥಾಪನೆ ಮಾಡಿದರು; ೧೪ ವರ್ಷ ಕಳೆದರೂ ಬಸ್ ನಿಲ್ದಾಣ ಆಗದೇ ಇರುವುದಕ್ಕೆ ಕಾರಣ ಏನು?

† ಶ್ರೀ ಆರ್. ಗುಂಡೂರಾವ್.—ಇದುವರೆಗೆ ಬಸ್ ನಿಲ್ದಾಣವನ್ನು ಕಟ್ಟಬೇಕಾಗಿತ್ತು; ಕಾರಣಾಂತರಗಳಿಂದ ಆ ಕೆಲಸ ಆಗಿಲ್ಲ, ಈಗ ಕೆಲಸವನ್ನು ಮುಂಗಿಸಿ ಬಿಡುವುದಕ್ಕೆ ತೀರ್ಮಾನ ಮಾಡಿದ್ದೇವೆ. ಮುಗಿಸುತ್ತೇವೆ.

ಶ್ರೀ ಎಂ. ಸಿ. ಬಸಪ್ಪ.—ಮುಂಜೂರಾತಿ ದೊರೆತಮೇಲೆ ಅಡಿಗಲ್ಲು ಹಾಕುತ್ತಾರೋ, ಕಣ್ಣು ಮುಚ್ಚಿಕೊಂಡು ಅಡಿಗಲ್ಲು ಹಾಕುತ್ತಾರೋ?

ಶ್ರೀ ಆರ್. ಗುಂಡೂರಾವ್.—ಮಂಜೂರಾದಮೇಲೆಯೇ ಅಡಿಗಲ್ಲು ಹಾಕುವುದು; ಈಗ ಹಾಕಿರ ಶಕ್ಯವುಗಳನ್ನು ಪೂರೈಸುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಸ್. ಎಸ್. ಆರಕೇರಿ.—ಜ್ವಳಕಿ ರಾಷ್ಟ್ರೀಯ ಹೆದ್ದಾರಿಯಲ್ಲಿದ್ದು, ಪಂಢರಾಪುರ ಹಾಗೂ ಬಿಜಾಪುರದ ಮಧ್ಯದಲ್ಲಿದೆ. ದಿನಂಪ್ರತಿ ನೂರಾರು ಜನ ಪ್ರಯಾಣಿಕರು ಪ್ರಯಾಣ ಮಾಡುತ್ತಾರೆ. ಜನತೆಯ ಹಿತದೃಷ್ಟಿಯಿಂದ ಕೂಡಲೇ ಕೆಲಸ ಪ್ರಾರಂಭ ಮಾಡುತ್ತೀರಾ? I have brought this matter on the floor of the House many a time.

SRI R. GUNDU RAO.—Sir, the hon. Member might have brought this matter to the notice of the Government. But the Corporation in its wisdom thought it fit to take up the works wherever it was urgent. That is why this was delayed. Now it will be taken up at an early date and will be completed.

ಶ್ರೀ ಎಸ್. ಎಸ್. ಆರಕೇರಿ. ೧೯೭೮-೭೯ನೇ ಸಾಲಿನ ಬಜೆಟ್ಟಿನಲ್ಲಿ ಸೇರಿಸಿದ್ದೇವೆಂದು ಹೇಳಿದ್ದೀರಿ; ೫-೬ ತಿಂಗಳಲ್ಲಿ ಕೆಲಸ ಪ್ರಾರಂಭ ಮಾಡುವುದಕ್ಕೆ ನಿರ್ದೇಶನ ಕೊಡುತ್ತೀರಾ?

SRI R. GUNDU RAO.—It will be completed.

ಶ್ರೀ ಪಿ. ಕೆ. ಕಳ್ಳಿಗುಡ್ಡ.—ಬಾಗಲಕೋಟೆ ತಾಲ್ಲೂಕಿನಲ್ಲಿ ಬಸ್ ನಿಲ್ದಾಣ ಕಟ್ಟಿಸುತ್ತೇವೆಂದು ಹೇಳಿ ಒಂದು ವರ್ಷವಾಯಿತು, ಇನ್ನು ಕಟ್ಟಿಸಿಲ್ಲ. ಬೇಗ ಕಟ್ಟಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಆರ್. ಗುಂಡೂರಾವ್.— ಕಟ್ಟಿಸಿಕೊಡುತ್ತೇವೆಂದು ಹೇಳಿದ್ದರೆ, ಖಂಡಿತ ಕಟ್ಟಿಸಿಕೊಡುತ್ತೇವೆ.

Regulating Raw Silk Trade

595 SRI M. C. BASAPPA (Chamarajanagar)—Will the Minister for Sericulture and Horticulture be pleased to state :—

(a) whether Government proposes to regulate Raw Silk Trade;

(b) if so, the steps taken by Government in that direction?

SRI K. B. SHIVAIAH (Minister for Sericulture and Horticulture)—

(a) Yes.

(b) The Karnataka Co-operative Silk Marketing Federation is attempting to give fair prices to the reelers. The Raw Material Bank purchases raw silk in bulk when the prices fall below the floor price. These steps are not adequate. Formation of a State Silk Board with a monopoly on purchase and sale of raw silk is under consideration.

ಶ್ರೀ ಎಂ. ಸಿ. ಬಸಪ್ಪ.—ನನ್ನ ಮೊದಲನೇ ಪ್ರಶ್ನೆಗೆ ಉತ್ತರವಾಗಿ ಹೌದು ಆಂತ ಹೇಳಿದ್ದೀರಿ. ಸರ್ಕಾರದವರು ಏನೇನು ಕ್ರಮಗಳನ್ನು ಕೈಗೊಂಡಿದ್ದೀರಿ ಎಂದು ಕೇಳಿದ್ದಕ್ಕೆ, ರೇಷ್ಮೆದಾರ ಸುತ್ತುವವರಿಗೆ ನ್ಯಾಯ ಬೆಲೆಗಳನ್ನು ಕೊಡಲು ಕರ್ನಾಟಕ ರಾಜ್ಯದ ಸಹಕಾರಿ ರೇಷ್ಮೆ ಮಾರುಕಟ್ಟೆ ಸಂಘದವರು ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಬೆಲೆಗಳು ಕನಿಷ್ಟ ಬೆಲೆಗಿಂತ ಕಡಿಮೆಯಾದಾಗ ಕಚ್ಚಾ ಪದಾರ್ಥಗಳ ಬ್ಯಾಂಕಿನವರು ಹೆಚ್ಚಿನ ಪ್ರಮಾಣದ ಕಚ್ಚಾ ರೇಷ್ಮೆಯನ್ನು ಖರೀದಿಸುತ್ತಾರೆಂದು ಹೇಳಿದ್ದೀರಿ. ಇದು ಸಮರ್ಪಕವಾದ ಉತ್ತರವಲ್ಲ. ಇದರ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವೇನು?

† ಶ್ರೀ ಕೆ. ಬಿ. ಶಿವಯ್ಯ.—ಸ್ವಾಮಿ, ರೇಷ್ಮೆ ವ್ಯಾಪಾರವನ್ನು ಕ್ರಮಗೊಳಿಸುವ ವಿಚಾರ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ೧೯೫೯ರಲ್ಲಿ ಮೈಸೂರು ಸಿಲ್ಕ್ ಮಾರ್ಕೆಟಿಂಗ್ ಕೋ ಆಪರೇಟಿವ್ ಸೊಸೈಟಿ, ಕಚ್ಚಾಪದಾರ್ಥಗಳ ಬ್ಯಾಂಕಿನವರು ರೇಷ್ಮೆಯನ್ನು ಖರೀದಿಸುತ್ತಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಬಸಪ್ಪನವರಿಗೆ ಸಾಕಷ್ಟು ಅನುಭವ ಇದೆ, ಈ ವ್ಯಾಪಾರ ಬೇರೆ ವ್ಯಾಪಾರಗಳಿಗಿಂತ ಭಿನ್ನವಾಗಿದೆ. ಇದನ್ನು ಮನಾವಲಿ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡುತ್ತಿದೆ.

ಶ್ರೀ ಎಂ. ಸಿ. ಬಸಪ್ಪ.—ಕಕ್ಕೂನ್ ಮಾರುಕಟ್ಟೆಗೆ ರೆಗ್ಯೂಲೇಟೇಡ್ ಮಾರುಕಟ್ಟೆ ಇದೆ. ಅಗ್ರಿ ಕಲ್ಚರ್ ಪ್ರೊಡ್ಯೂಸ್‌ಗೆ ರೆಗ್ಯೂಲೇಟೆಡ್ ಮಾರುಕಟ್ಟೆ ಇದೆ. ಅದೇ ರೀತಿ ಇದಕ್ಕೂ ಮಾಡುವುದಕ್ಕೆ ಆಗುವುದಿಲ್ಲವೆ?

SRI K. B. SHIVAIAH.—Sir, there is no such system at present.

SRI M. C. BASAPPA.—Sir, is the Government aware that lot of inconveniance is caused to the wheelers in Avenue Road by Raw Silk Traders?

ಶ್ರೀ ಕೆ. ಬಿ. ಶಿವಯ್ಯ.—ಸ್ವಾಮಿ, ಈಗ ಅವಿನ್ಯೂ ರಸ್ತೆಯಲ್ಲಿ ರೇಷ್ಮೆ ವ್ಯಾಪಾರದ ಬಗ್ಗೆ ಏನಾಗುತ್ತದೆ ಎನ್ನುವುದರ ಬಗ್ಗೆ ಈಗಾಗಲೇ ಈ ಮನೆಯಲ್ಲಿ ೧-೨ ಸಾರಿ ತಿಳಿಸಿದ್ದೇನೆ. ಮತ್ತೆ ಈ ಮನೆಯಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಬಹುತೇಕ ಇಪತ್ತು ಅಲ್ಲಿ ನಡೆಯತಕ್ಕ ರೇಷ್ಮೆ ವ್ಯಾಪಾರ ಮೂರು